

> ಪಂಪನನ್ನು ವಿಮರ್ಶಿಸುವಾಗ ಬಳಸಿದ ದೃಷ್ಟಿಕೋನಗಳನ್ನ ಹೊಸ ತಲೆಮಾರಿನವರನ್ನು ನೋಡುವಾಗ ಬಳಸಲು ಆಗುವುದಿಲ್ಲ. ಹೊಸಬರ ಶಕ್ತಿ ಮತ್ತು ಮಿತಿಗಳನ್ನು ನೋಡಲು ನಾನು ಬೇರೆಯದೇ ಆದ ಸಾಹಿತ್ಯಿಕ ತಿಳಿವಳಿಕೆಯನ್ನು ಬಳಸ್ತಾ ಇರ್ತೇನೆ. ಅಂತಹ ತಿಳಿವಳಿಕೆಯು ವಿಮರ್ಶೆ ಮಾಡುತ್ತಿರುವ ಕೃತಿಯಲ್ಲಿಯೇ ಮೂಡಿಬರುತ್ತದೆ.

ವಿಮರ್ಶಕರಾದವರು ತಮ್ಮ ಒಟ್ಟು ವಿಮರ್ಶೆಯ ಮೂಲಕ ಕೇವಲ ಸಾಹಿತ್ಯದರ್ಶನವನ್ನು ಮಾತ್ರ ಮಾಡುತ್ತಿರುವುದಿಲ್ಲ. ಲೋಕದರ್ಶನವನ್ನೂ ಮಾಡುವ ಸಾಧ್ಯತೆಯಿದೆ ಎಂಬುದನ್ನು ನಂಬಿದಾಗ ವಿಮರ್ಶೆಗೆ ಬೇರೆ ಬೇರೆ ಆಯಾಮಗಳು ಲಭಿಸುತ್ತವೆ. ಕನ್ನಡದಲ್ಲಿ ವಿಮರ್ಶೆಗೂ ಪಾಂಡಿತ್ಯಕ್ಕೂ ವಿಚಿತ್ರವಾದ ಸಂಬಂಧವನ್ನು ನಾವು ಕಲ್ಪಿಸಿದ್ದೇವೆ. ಇದರಿಂದ ಸಾಹಿತ್ಯದರ್ಶನ ಮುನ್ನೆಲೆಗೆ ಬಂದು ಲೋಕದರ್ಶನ ಹಿನ್ನೆಲೆಗೆ ಸರಿಯಿತು. ಇನ್ನೊಂದು ಸಂಗತಿಯನ್ನು ಗಮನಿಸಿ. ನಮ್ಮಲ್ಲಿ ಸೃಜನಶೀಲ ಲೇಖಕರು ಬರೆದ ವಿಮರ್ಶೆಗೂ, ಪೂರ್ಣಪ್ರಮಾಣದ ವಿಮರ್ಶಕರ ಬರಹಕ್ಕೂ ವ್ಯತ್ಯಾಸವಿದೆ. ಸೃಜನಶೀಲ ಲೇಖಕರ ವಿಮರ್ಶೆಯು ಒಂದು ಬಗೆಯಲ್ಲಿ ಪಾಂಡಿತ್ಯದೂರವಾದ ವಿಮರ್ಶೆ. ಪೂರ್ಣಪ್ರಮಾಣದ ವಿಮರ್ಶಕರ ವಿಮರ್ಶೆಯು 'ಪಾಂಡಿತ್ಯ'ವನ್ನು ಅವಲಂಬಿಸಿದ ವಿಮರ್ಶೆ. ಲಂಕೇಶ್ ವಿಮರ್ಶೆ ಮತ್ತು ಡಿ.ಆರ್. ನಾಗರಾಜ್‌ರ ವಿಮರ್ಶೆ ಗಮನಿಸಿ. ಇನ್ನೊಂದು ಉದಾಹರಣೆ ಕೊಡುವೆ. ಆಗಾಗ ಪೂರ್ಣಚಂದ್ರ ತೇಜಸ್ವಿ ಅವರು ಬರೆದ ವಿಮರ್ಶೆ ಗಮನಿಸಿ. ತೇಜಸ್ವಿಯವರ ವಿಮರ್ಶೆಯಲ್ಲಿ ಕಂಡುಬರುವ ಲೋಕದರ್ಶನ ವೃತ್ತಿನಿರತ ವಿಮರ್ಶಕರಲ್ಲಿ ಯಾಕೆ ಕಂಡುಬರುವುದಿಲ್ಲ? ಡಿ.ಆರ್. ನಾಗರಾಜರ 'ಅಮೃತ ಮತ್ತು ಗರುಡ', 'ಶಕ್ತಿ ಶಾರದೆಯ ಮೇಳ'ದಲ್ಲಿ ಸಾಹಿತ್ಯ ದರ್ಶನ ಮುನ್ನಲೆಯಲ್ಲಿದ್ದು, 'ಸಾಹಿತ್ಯ ಕಥನ', 'ಸಂಸ್ಕೃತಿ ಕಥನ'ದಲ್ಲಿ ಲೋಕದರ್ಶನ ಮುನ್ನೆಲೆಗೆ ಬಂದಿದೆ. ಯಾಕೆ ಹೀಗಾಯಿತು? ಲೋಕದರ್ಶನ ಕೆಲ ವಿಮರ್ಶಕರಲ್ಲಿ ಢಾಳಾಗಿ ಕಂಡುಬಂದರೆ, ಮತ್ತೆ ಕೆಲವರಲ್ಲಿ ಮೆಲುದನಿಯಲ್ಲಿ ಕಂಡುಬರುತ್ತದೆ. ಕನ್ನಡದ ವಿಮರ್ಶಕರು ತಾನು ನಿರ್ಲಿಪ್ತನಾಗಿಯೂ ಇರಬೇಕು, ತನ್ನ ಜೀವನದರ್ಶನವನ್ನೂ ಕಾಣಿಸಬೇಕು ಎಂಬ ಇಬ್ಬಾಯಿಯ ಖಡ್ಗದಲ್ಲಿ ಬರವಣಿಗೆ ಮಾಡಿದಂತಿದೆ. ಕನ್ನಡದ ವಿಮರ್ಶಕರು ಸಾಹಿತ್ಯ ವಿಮರ್ಶೆಯಿಂದ ಹೊರಬರಲು ಹಲವು ತರಹದ ಬರವಣಿಗೆ ಮಾಡಿದ ನಿದರ್ಶನಗಳು ನಮ್ಮ ಕಣ್ಣೆದುರು ಇವೆ. ನಾನು ಒಂದು ವಾದದ ಹಿನ್ನೆಲೆಯಲ್ಲಿಯೇ ಬರೆಯುತ್ತೇನೆಂದು ಹಟ ಹಿಡಿದಾಗ ಸ್ವಂತದ್ದೇನು ಎಂಬ ಪ್ರಶ್ನೆಯೂ ಎದುರಾಗುತ್ತದೆ. ಕನ್ನಡ ವಿಮರ್ಶೆಯಲ್ಲಿ ಇದು ಹಲವು ಬಾರಿ ಆಗಿದೆ. ಶಂಬಾ ಅವರು ಬೇಂದ್ರೆ ಅವರ ಕಾವ್ಯವನ್ನು 'ಚಾಂದ್ರಮಾನ ಸಂಸ್ಕೃತಿಯ ಕಾವ್ಯ'ವೆಂದು ಯಾಕೆ ಕರೆದರು? ಅವರಿಬ್ಬರ ತಿಳಿವಳಿಕೆಯ ನಡುವೆ ಇದ್ದ ಬಿರುಕು ಯಾವ ಬಗೆಯದು? ಇದೆಲ್ಲ ಕೇವಲ ದ್ವೇಷದ ಪ್ರಶ್ನೆ ಅಲ್ಲ. ಲೋಕದರ್ಶನ ವಿಭಿನ್ನವಾಗಿದ್ದೇ ಇದಕ್ಕೆಲ್ಲ ಕಾರಣ. ಆದರೆ ಒಂದು ನಾವು ನೆನಪಿಟ್ಟುಕೊಳ್ಳಬೇಕಾದದ್ದೇನೆಂದರೆ, ವಿಮರ್ಶಕರ ಲೋಕದರ್ಶನ ಅವರ ವಿಮರ್ಶೆಯ ಅಂತರಗಂಗೆಯಾಗಿರಬೇಕೇ ಹೊರತು ಹೊರಗಿನ ಕೂಗು ಆಗಿರಬಾರದು. ಹಾಗಾದಾಗ ನಾವು ಎಷ್ಟೇ ಆಕರ್ಷಕವಾಗಿ ಬರೆದರೂ ಅದರಲ್ಲಿ ಸ್ವತಂತ್ರವಾದ ಕಲಾದರ್ಶನ ಲೋಕದರ್ಶನ ಬರದೇ ಹೋಗಿಬಿಡುತ್ತದೆ. ಇಷ್ಟಕ್ಕೂ ಕನ್ನಡ ಸೃಜನಶೀಲ